# ಮೂವರು ಹೆಂಡಿರ ಮುದ್ದಿನ ಗಂಡ!



ಜೋ ಕುಟುಂಬದ ಸದಸ್ಯರ ಚಿತ್ರ

ಒಬ್ಬ ಪತ್ನಿಯನ್ನು ಸುಧಾರಿಸುವುದೇ ಕಷ್ಟದ ಕೆಲಸ. ಆದರೆ ಇಲ್ಲೊಬ್ಬ ಸಾಹಸಿ ಅಮೆರಿಕನ್ ಮೂವರು ಹೆಂಡತಿಯರ ಜತೆಗೆ ಸುಖವಾಗಿ ಬದುಕುತ್ತಿದ್ದಾನೆ!

43ರ ಹರೆಯದ ಜೋ ಡಾರ್ಜರ್ ಈ ಸಾಹಸಿ. ಈತನಿಗೆ ಮೂವರು ಹೆಂಡತಿಯರು. ಅವರಲ್ಲಿ ಇಬ್ಬರು ಒಂದೇ ತಾಯಿಯ ಅವಳಿ ಮಕ್ಕಳು. ಮೂರನೆಯ ಹೆಂಡತಿ ಈ ಅವಳಿಗಳ ಕಜಿನ್ (ಚಿಕ್ಕಪ್ಪನ ಮಗಳು.) ಜೋ ಡಾರ್ಜರ್ ಸಂಸಾರ ದೊಡ್ಡದು. ಮೂವರು ಪತ್ನಿಯರಿಂದ ಒಟ್ಟು 24 ಮಕ್ಕಳು!

ಯೂರೋಪಿನಿಂದ ವಲಸೆ ಬಂದ ಮಾರ್ಮೋನ್ ಮೂಲದ ಜನರೇ ಹೆಚ್ಚಿರುವ ರಾಜ್ಯ ಉಟಾ. ಇವರು ಕಟ್ಟಾ ಧಾರ್ಮಿಕರು. ಬಹುಪತ್ನಿತ್ವಕ್ಕೆ ಇಲ್ಲಿ ಅವಕಾಶವೇ ಇಲ್ಲ. ಆದರೆ ಜೋ ಗೆ ಇದ್ಯಾವುದೂ ಸಮಸ್ಯೆಯೇ ಆಗಿಲ್ಲ. ಜೋ ಹಾಗೂ ಆತನ ಮೂವರು  ಹೆಂಡತಿಯರಲ್ಲಿ ಎಂತಹ ಸಾಮರಸ್ಯ ಇದೆಯೆಂದರೆ, ಅಲ್ಲಿನ ಕಠಿಣ ಕಾನೂನು ಹಾಗೂ ಧಾರ್ಮಿಕ ಕಟ್ಟಳೆಗಳಿಂದಲೂ ಇವರನ್ನು ಬೇರ್ಪಡಿಸಲು ಸಾಧ್ಯವಾಗಿಲ್ಲ. ಕುಟುಂಬದಲ್ಲಿ ತಕರಾರೇ ಇಲ್ಲ ಎಂದ ಮೇಲೆ ಕಾನೂನು ಹಸ್ತಕ್ಷೇಪ ಮಾಡುವ ಪ್ರಶ್ನೆ ಎಲ್ಲಿಂದ?



ಮೂವರು ಹೆಂಡತಿಯರೊಂದಿಗೆ ಅವರ ಮುದ್ದಿನ ಗಂಡ ಜೋ ಡಾರ್ಜರ್

ಜೋ ನ ಹೆಂಡತಿಯರಾದ ವಿಕ್ಕಿ ಮತ್ತು ವೆಲರಿ ಅವಳಿ ಸಹೋದರಿಯರು. ಮೂರನೇ ಹೆಂಡತಿ ಅಲೀನಾ ಅವರ ಕಸಿನ್. ಮೂವರಿಗೂ ಪ್ರತ್ಯೇಕ ಶಯನ ಕೋಣೆಗಳಿದ್ದು. ಜೋ ಪಾಳಿಯ ಪ್ರಕಾರ ಪತ್ನಿಯರ ಕೋಣೆಯಲ್ಲಿ ವಿಶ್ರಮಿಸುತ್ತಾನೆ.

ವಿಕ್ಕಿಯನ್ನು ಮೊದಲು ವಿವಾಹವಾದಾಗ ಜೋಗೆ ಕೇವಲ 18 ವರ್ಷ. ಮರುದಿನವೇ ವಿಕ್ಕಿಯ ಕಸಿನ್ ಅಲೇನಾಳ ಕೈಹಿಡಿದ. ಎರಡನೆಯ ಪತ್ನಿಯ ವಿವಾಹಕ್ಕೆ ಸಾಕ್ಷಿಯಾಗಿ ಸಹಿ ಮಾಡಿದವಳು ಮೊದಲ ಪತ್ನಿ ವಿಕ್ಕಿ! ವಿಕ್ಕಿ ಹಾಗೂ ಅಲೆನಾ, ಮದುವೆಗೆ ಮೊದಲೇ ಜೀವಕ್ಕೆ ಜೀವ ಕೊಡುವ ಗೆಳತಿಯರಾಗಿದ್ದರು. ಈಗಲೂ ಅವರು ಹಾಗೆಯೇ ಇದ್ದಾರೆ. ಜೋನನ್ನೇ ಮದುವೆಯಾಗಿ ಜೀವನವಿಡೀ ಒಂದಾಗಿಯೇ ಇರಲು ಅವರಿಬ್ಬರೂ ನಿರ್ಧರಿಸಿದ್ದರು.

ಜೋ ಪತ್ನಿಯರಾದ ವಿಕ್ಕಿ ಹಾಗೂ ಅಲೆನಾ ಜತೆಗೆ ಹತ್ತು ವರ್ಷಗಳ ಸುಖ ಸಂಸಾರ ನಡೆಸಿದ ಬಳಿಕ, ವಿಕ್ಕಿಯ ಜತೆ ಅವಳಿಯಾಗಿ ಹುಟ್ಟಿದ್ದ ವೆಲರಿ ಇವರ ಸಂಸಾರದಲ್ಲಿ ಮೂರನೆ ಹೆಂಡತಿಯಾಗಿ ಪ್ರವೇಶಿಸಿದಳು.  ಅದೂ ವಿಕ್ಕಿ ಹಾಗೂ ಅಲೆನಾರ ಪ್ರೀತಿಯ ಒತ್ತಾಯದಿಂದ! ಈ ಮೊದಲು ವೆಲರಿ ಮುದುಕನೊಬ್ಬನ ಜತೆ ಮದುವೆಯಾಗಿ ಅವನಿಂದ ವಿಚ್ಛೇದನ ಪಡೆದು ಒಂಟಿಯಾಗಿದ್ದಳು.

ಈ ಮನೆಯಲ್ಲೇನೋ ನಡೆಯಬಾರದ್ದು ನಡೆಯುತ್ತಿದೆ ಎಂಬ ಗುಮಾನಿಯಿಂದ, ಕೆಲವು ಸರಕಾರಿ ಅಧಿಕಾರಿಗಳು ದಿಢೀರನೆ ಜೋ ಕುಟುಂಬಕ್ಕೆ ಭೇಟಿ ಕೊಟ್ಟು ವಿಚಾರಣೆ ನಡೆಸಿದ್ದರಂತೆ. ಅವರಿಗೆ ಅಂತಹದ್ದೇನೂ ದೊರೆಯದೆ ಬರಿಗೈಯಲ್ಲಿ ಮರಳಿದ್ದರು.

ಜೋ ಹಾಗೂ ಆತನ ಮೂವರು ಪತ್ನಿಯರು ಸೇರಿ 'ಪ್ರೀತಿಯ ಸಮಯ–3' ಎಂಬ ಪುಸ್ತಕವನ್ನೂ ಬರೆದಿದ್ದಾರೆ. ಆ ಪುಸ್ತಕದಲ್ಲಿ ಅವರ ಕೆಲವು ಹಿರಿಯ ಮಕ್ಕಳೂ ತಮ್ಮ ಅನನ್ಯ ಅನುಭವವನ್ನು ಹಂಚಿಕೊಂಡಿದ್ದಾರೆ. ಈ ಮೂಲಕ ಬಹುಪತ್ನಿತ್ವಕ್ಕೆ ಸಾಮಾಜಿಕ ಮನ್ನಣೆ ದೊರೆಯಬಹುದು ಎಂಬುದು ಅವರೆಲ್ಲರ ಅನಿಸಿಕೆ.

■ ಸುಭಾಸ ಯಾದವಾಡ